ಮಂಜೂರು ಮಾಡಿ, ಮುಂದಿನ ಬೆಳೆ ಇಡಲು ಆತನಿಗೆ ಎಲ್ಲಾ ವಿಧವಾದ ಸಹಾಯವನ್ನು ಕೊಡಲು ಈ ಸದನದ ಮೂಲಕ ನೊಂದಿರುವ ರೈತರಿಗೆ ಸರ್ಕಾರ ಭರವಸೆ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಈ ಪ್ರಶ್ನೆಗೆ ಸೂಕ್ತ ಉತ್ತರ ಇಲ್ಲ. ವಿಚಾರಿಸಿ ಉತ್ತರವನ್ನು ಕೊಡುತ್ತೇನೆ.

೫) ಮಲೆನಾಡು ಭಾಗಗಳಲ್ಲಿ ಸೌದೆಗೆ ವಿಭಿನ್ನ ರೀತಿಯ ಬೆಲೆ ಆರಣ್ಯ ಇಲಾಖೆಯವರು ನಿಗದಿಪಡಿಸಿರುವುದು

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ಸಿದ್ದಾಪುರ ಮತ್ತು ಸಾಗರ ತಾಲ್ಲೂಕುಗಳು ಅಕ್ಕ ಪಕ್ಕದವುಗಳಾಗಿದ್ದು ಎರಡೂ ತಾಲ್ಲೂಕುಗಳೂ ಸಮನಾದ ಮಲೆನಾಡಾಗಿದ್ದು ಕಾಡೂ ಸಹ ಸಮನಾಗಿರುತ್ತೆ. ಹೀಗಿದ್ದೂ ಸಹ ಆರಣ್ಯ ಇಲಾಖೆಯವರು ಸಿದ್ದಾಪುರ ತಾಲ್ಲೂಕಿನಲ್ಲಿ ಸೌದೆಗೆ ಟನ್ ಒಂದಕ್ಕೆ ೮೦ (ಎಂಬತ್ತು ರೂಪಾಯಿಗಳು), ಅದೇ ರೀತಿ ಸಾಗರದಲ್ಲಿ ೧೬೦ ರೂಪಾಯಿಗಳಂತೆಯೂ ಸರ್ಕಾರಿ ಡಿಪೋಗಳಲ್ಲಿ ಮಾರಾಟ ಮಾಡಲ್ಪಡುತ್ತೆ. ಈ ರೀತಿ ಒಂದೇ ಸಮನಾದ ಮಲೆನಾಡು ಭಾಗಗಳಲ್ಲಿ ಎರಡು ರೀತಿಯ ಬೆಲೆ ನಿರ್ಧಾರ ಮಾಡಿರುವ ಕಾರಣವೇನು ? ಮತ್ತು ಈ ರೀತಿಯ ತಾರತಮ್ಯ ಮಾಡಿರುವುದನ್ನು ಸರಿಪಡಿಸಿ ಸಾಗರದಲ್ಲೂ ಸಿದ್ದಾಪುರ ತಾಲ್ಲೂಕಿನಂತೆಯೇ ಟನ್ ಒಂದಕ್ಕೆ ೮೦ ರೂಪಾಯಿಗಳಂತೆ ಸೌದೆಯನ್ನು ಮಾರಾಟ ಮಾಡಲು ಕ್ರಮ ತೆಗೆದುಕೊಳ್ಳಬೇಕಾಗಿ ಸಂಬಂಧಪಟ್ಟ ಆರಣ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಈ ವಿವರ ನನ್ನ ಕಡೆ ಇಲ್ಲ. ಕ್ರಮ ವನ್ನು ತೆಗೆದುಕೊಂಡು ಉತ್ತರ ಕೊಡುತ್ತೇನೆ.

೬) ಉಳ್ಳಾಲದ ಬೆಂಗರೆಯಂ ನಾಗರೀಕರಿಗೆ ಮತದಾನದ ಹಕ್ಕು ಕೊಡುವ ಬಗ್ಗೆ

ಶ್ರೀ ಬಿ.ಎಂ. ಇದ್ದಿನಬ್ಬ.—ಮಾನ್ಯ ಅಧ್ಯಕ್ಷರೇ, ಉಳ್ಳಾಲ ಕ್ಷೇತ್ರಕ್ಕೆ ಒಳಪಟ್ಟ ಬೆಂಗರೆ ಸುಮಾರು ಮೂರು ಸಾವಿರಕ್ಕೂ ಮಿಕ್ಕಿ ಜನ ಸಂಖ್ಯೆಯಿರುವ ಪ್ರದೇಶ. ಮಂಗಳೂರು ಬಂದರಿನ ಗುರುಪುರ ನದಿಯ ಆಚೆ ಭಾಗದ ಈ ಪ್ರದೇಶದಲ್ಲಿ ಮೀನುಗಾರರೂ, ಅಲ್ಪಸಂಖ್ಯಾತ ಮುಸ್ಲಿಮರೂ ವಾಸವಾಗಿರುತ್ತಾರೆ. ಈ ಪ್ರದೇಶದವರಿಗೆ ಲೋಕಸಭೆ ಮತ್ತು ವಿಧಾನಸಭೆಯ ಚುನಾವಣೆಗಳಲ್ಲಿ ಮಾತ್ರ ಮತದಾನದ ಹಕ್ಕು ಇದೆ. ಇವರಿಗೆ ತಾಲ್ಲೂಕು ಬೋರ್ಡ್, ಪಂಚಾಯತ್‌ಗಳಲ್ಲಿ ಮತದಾನದ ಹಕ್ಕು ಇಲ್ಲ. ಇಲ್ಲಿ ಆದಿಯಿಂದಲೇ ಪಂಚಾಯತ್ ಇಲ್ಲ. ಈಚೆಗೆ ಜರಗಿದ ಜಿಲ್ಲಾ ಪರಿಷತ್ತಿಗೂ ಮಂಡಲ ಪಂಚಾಯಿತಿಗೂ ಇವರಿಗೆ ಮತದಾನದ ಹಕ್ಕು ಇರಲಿಲ್ಲ. ಹೀಗೆ, ಯಾವುದಕ್ಕೂ ಒಳಪಡದೆ ಇರುವುದರಿಂದ ಇಲ್ಲಿನ ಜನರ ಅಭಿವೃದ್ಧಿಗೆ ಭಾರೀ ತೊಂದರೆ ಒದಗಿರುತ್ತದೆ. ಇವರು ತ್ರಿಶಂಕುವಿನಲ್ಲಿ ಕಷ್ಟಪಡುತ್ತಿದ್ದಾರೆ. ಇವರ ಅಭಿವೃದ್ಧಿಗಾಗಿ ಮತ್ತು ಆ ಪ್ರದೇಶದ ಪ್ರಗತಿಗಾಗಿ ಈ ಪ್ರದೇಶವನ್ನು ಮಂಗಳೂರು ಪೂರ್ವಕ್ಕೆ ಸೇರಿಸಬಹುದು, ಇಲ್ಲವೇ ಪುರಸಭೆಯಾಗಿ ಪಂಚಾಯತ್ ಮಾಡಬಹುದು. ಇದು ಅತೀ ಅಗತ್ಯದ ಸಂಗತಿ, ಇಲ್ಲಿನ ಜನರು ದುಃಖಿತರಾಗಿರುತ್ತಾರೆಂದು ತಿಳಿಸಿ ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ನಗರ ಪ್ರದೇಶದ ಹೊರವಲಯದಲ್ಲಿ ಇರುವವರು ಜಿಲ್ಲಾ ಪರಿಷತ್ತಿಗೂ ಮತದಾನ ಮಾಡುವ ಅಧಿಕಾರ ಇಲ್ಲವಾಗಿದೆ. ಕಾರ್ಪೋರೇಷನ್ ಚುನಾವಣೆಯಲ್ಲೂ ಮತದಾನ ಮಾಡುವ ಅಧಿಕಾರ ಇಲ್ಲವಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

(೭) ಕರ್ನಾಟಕದಲ್ಲಿ ಸ್ಟೀಲ್ ರೀರೋಲಿಂಗ್ ಪ್ಲಾಂಟನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕರ್ನಾಟಕದಲ್ಲಿ ದಿನಾಂಕ ೨೫ನೇ ಜೂನವರಿ ೧೯೮೭ರ ವರೆಗೆ ಸ್ಟೀಲ್ ರೀರೋಲಿಂಗ್ ಪ್ಲಾಂಟ್‌ಗಳ ಸಂಖ್ಯೆ ಹಾಗೂ ಮಾಲೀಕರುಗಳ ಹೆಸರುಗಳ ವಿವರವನ್ನು ಸದನಕ್ಕೆ ಕೊಡುವಂತೆ ಒತ್ತಾಯಿಸುತ್ತೇನೆ. ಕೇಂದ್ರ ಸರಕಾರದ ಸ್ಟೀಲ್ ರೀರೋಲಿಂಗ್ ಪ್ಲಾಂಟ್‌ಗಳ